ದಿನಾಂಕ 28-01-2020 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

:ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :

ವಿಪಿಸಿ ನಂ.104 ರ ಋಣಭಾರ ಪತ್ರಿಕೆಯಲ್ಲಿ ದಿನಾಂಕಃ 22-01-1976 ರಿಂದ ದಿನಾಂಕಃ 22-01-1990 ರ ವರೆಗೆ ಗಂಗವ್ವಳ ಹೆಸರು ನಮೂದಾಗಿದೆ ಅಂದರೆ ಸರಿಯಲ್ಲಾ. 1987 ರಿಂದ 2000 ನೇ ಸಾಲಿನವರೆಗೆ ಮೋಹನ ದ್ಯಾಮಕ್ಕನವರ ಇವರ ಹೆಸರು ಋಣಭಾರ ಪತ್ರಿಕೆಯಲ್ಲಿ ನಮೂದಾಗಿದೆ ಅಂದರೆ ಸರಿಯಲ್ಲ. ದಿನಾಂಕಃ 03-04-2012 ರ ವರೆಗೆ ಮೋಹನ ದ್ಯಾಮಕ್ಕನವರ ಮತ್ತು ಇವರ ವಾರಸುದಾರರು ತೆರಿಗೆ ಪಾವತಿಸುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲಾ. ನಾನು ಋಣಭಾರ ಪತ್ರಿಕೆಯನ್ನು ಸಬ್ ರಜಿಸ್ಟ್ರಾರ ಕಚೇರಿಯಲ್ಲಿ ಆಗಲೀ ಆಥವಾ ಸಕ್ಷಮ ನ್ಯಾಯಾಲಯದಲ್ಲಿ ಆಗಲೀ ಪ್ರಶ್ನಿಸಿರುವುದಿಲ್ಲಾ. ದಿನಾಂಕಃ 01-04-2000 ರಿಂದ ದಿನಾಂಕಃ 31-03-2012 ರ ವರೆಗೆ ವಿಪಿಸಿ ನಂ.104 ನೇ ಆಸ್ತಿ ವಿಸ್ತೀರ್ಣ 2670 ಚೌರಸ್ ಫೂಟು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಅಂದರೆ ಸರಿಯಲ್ಲ. ನಾನು ಋಣಭಾರ ಪತ್ರಿಕೆಯನ್ನು ಸಬ್ ರಜಿಸ್ಟ್ರಾರ ಕಚೇರಿಯಲ್ಲಿ ಆಗಲೀ ಆಥವಾ ಸಕ್ಷಮ ನ್ಯಾಯಾಲಯದಲ್ಲಿ ಆಗಲೀ ಪ್ರಶ್ನಿಸಿರುವುದಿಲ್ಲಾ. ನಾನು ಮಾಲಕರ ಹೆಸರು ಮತ್ತು ವಿಸ್ತೀರ್ಣ ತಪ್ಪು ಇದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತೇನೆ ಅಂದರೆ ಸರಿಯಲ್ಲ. ವಿಪಿಸಿ ನಂ.104 ನೇ ಆಸ್ತಿಗೆ 1 ರಿಂದ 3 ನೇ ಪ್ರತಿವಾದಿಯರು ಸಂಪೂರ್ಣ ಮಾಲಕರು ಇದ್ದು ಅವರೇ ತೆರಿಗೆ ಪಾವತಿ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲಾ.

ನಮ್ಮ ಮನೆತನದ ಕೃಷಿ ಜಮೀನು ಮತ್ತು ಮನೆದಳದ ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡು ಬೇರೆ ಬೇರೆಯವರ ಹೆಸರಿನಲ್ಲಿ ಇವೆ ಅಂದರೆ ಸರಿಯಲ್ಲ. ಅದೇ ರೀತಿ ನನ್ನ ಹೆಸರಿನಲ್ಲೂ

ಪಂಚಾಯತಿ ಆಸ್ತಿ ಮತ್ತು ಜಮೀನು ಇದೆ ಅಂದರೆ ನಿಜ, ಅದು ವಾರಸಾ ಪ್ರಕಾರ ಬಂದಿರುತ್ತದೆ. ನಮ್ಮ ಸಹೋದರರೆಲ್ಲರೂ ವಿಭಾಗ ಮಾಡಿಕೊಂಡು ನಮಗೆ ಬಂದ ಆಸಿತಗಳನ್ನು ನಾವು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತೇವೆ ಅಂದರೆ ಸಾಕ್ಷಿಯು ನಾವು ವಾಟ್ನಿ ಮಾಡಿಕೊಂಡಿರುವುದಿಲ್ಲಾ ಅನ್ನುತ್ತಾರೆ. ನಮ್ಮ ಕುಟುಂಬದ ಆಸ್ತಿಗಳನ್ನು ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪನ ಜೀವಿತಾವಧಿ ಯಲ್ಲಿಯೇ ವಿಭಾಗ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲಾ. ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪನ ಹೆಸರಿನಲ್ಲಿ ಅವರವರಿಗೆ ಬಂದ ಆಸ್ತಿಗಳು ಅವರವರಿಗೆ ಹೆಸರಿನಲ್ಲಿ ಬಂದಿವೆ ಅಂದರೆ ಸಾಕ್ಷಿಯು ವಹಿವಾಟಿ ಪ್ರಕಾರ ಬಂದಿವೆ ಅನ್ನುತ್ತಾರೆ. ನಾವು ಆ ಪ್ರಕಾರ ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ಸಾಲ ಪಡೆದುಕೊಂಡಿದ್ದೇವೆ. ದಿನಾಂಕಃ 18-09-1969 ರಲ್ಲಿ ಕೇಶವರಾವ್ ಎನ್ನುವವರು ಅವರ ಮೂಲ ಮಾಲಕರಿಂದ ಖರೀದಿ ಪಡೆದಿರುವುದಿಲ್ಲಾ ಎಂದು ಸಬ್ ರಜಿಸ್ಟಾರ್ ರವರು ಕೊಟ್ಟ ಹಿಂಬರಹ ಕೊಟ್ಟಿದ್ದಾರೆ ಅಂದರೆ ಸರಿಯಲ್ಲಾ. ಕೇಶವರಾವ್ ಎನ್ನುವವರು ಆಸ್ತಿ ನಂ.103 ಮತ್ತು 104 ನ್ನು ಖರಿದಿಸಿರುವುದಿಲ್ಲ ಮತ್ತು ಆತನು ಮಾಲಕನಾಗಿರುವುದಿಲ್ಲಾ ಅಂದರೆ ಸರಿಯಲ್ಲಾ. ವಿಪಿಸಿ ನಂ.104 ರಲ್ಲಿ ನಮಗೆ ಯಾವ್ರೋ ಮಾಲಕತ್ವದ ಹಕ್ಕು ಪ್ರಾಪ್ತವಾಗಿರುವುದಿಲ್ಲಾ ಅಂದರೆ ಸರಿಯಲ್ಲಾ. ಕೇಶವರಾವ್ ಎನ್ನುವವರು ಪತ್ರ ಬರಹಗಾರನಾಗಿದ್ದು ನಮಗೆ ಸುಳ್ಳು ಮಾಹಿತಿ ನೀಡಿ ಸುಳ್ಳು ಕ್ರಯ ಪತ್ರ ಬರೆದುಕೊಟ್ಟಿದ್ದಾನೆ ಅಂದರೆ ಸರಿಯಲ್ಲಾ. ಆದ್ದರಿಂದ ವಿಪಿಸಿ ನಂ.104 ಗಂಗವ್ವಳ ಹೆಸರಿನಲ್ಲಿ ಆಕೆ ಮೃತಪಟ್ಟ ನಂತರ ಅವಳ ವಾರಸುದಾರರ ಹೆಸರಿನಲ್ಲಿ ಅನಂತರ 1 ರಿಂದ 3 ನೇ ಪ್ರತಿವಾದಿಯರ ಹಸರಿನಲ್ಲಿ ದಾಖಲಾಗಿದೆ ಅಂದರೆ ಸರಿಯಲ್ಲಾ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಮೃತ ಮೋಹನ ಚಂದ್ರ 5 ನೇ ಪ್ರತಿವಾದಿಗೆ ಖೊಟ್ಟಿ ಖರೀದಿ ಪತ್ರ ಬರೆದುಕೊಟ್ಟಿದ್ದಾನೆ ಎಂದು ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲಾ. ಮೃತ ಮೋಹನ ಚಂದ್ರ ತನ್ನ ಮಾಲಿಕತ್ವದ ವಿಪಿಸಿ ನಂ.104 ರ ಸ್ವಲ್ಪ ಭಾಗವನ್ನು 5 ನೇ ಪ್ರತಿವಾದಿಗೆ

ಖರೀದಿಗೆ ಕೊಟ್ಟಿದ್ದಾನೆ ಅಂದರೆ ಸರಿಯಲ್ಲಾ. ಆ ಪ್ರಕಾರ 5 ನೇ ಪ್ರತಿವಾದಿಯ ಹೆಸರಿಗೆ ಪಂಚಾಯತಿ ದಾಖಲೆಗಳಲ್ಲಿ ನಮೂದಾಗಿದೆ ಅಂದರೆ ಸರಿಯಲ್ಲಾ. ಸಾಕ್ಷಿ ಪುನಃ ಸ್ವಲ್ಪ ಭಾಗ 5 ನೇ ಪ್ರತಿವಾದಿಯ ಹೆಸರಿಗೆ ಇದೆ ಅನ್ನುತ್ತಾರೆ. ಎಷ್ಟು ವಿಸ್ತೀರ್ಣದ ಕ್ಷೇತ್ರವನ್ನು ಖರೀದಿಸಿರುತ್ತಾರೋ ಅಷ್ಟು ವಿಸ್ತೀರ್ಣ ಪಂಚಾಯತಿ ದಾಖಲೆಗಳಲ್ಲಿ ನಮೂದಾಗಿದೆ ಅಂದರೆ ಸರಿಯಲ್ಲಾ. ವಿಪಿಸಿ ನಂ.104 ರಲ್ಲಿ ನಮ್ಮ ಪೂರ್ವಜರಿಗಾಗಲೀ, ನಮಗಾಗಲೀ ಯಾವುದೇ ಮಾಲೀಕತ್ವದ ಹಕ್ಕು ಇಲ್ಲಾ ಅಂದರೆ ಸರಿಯಲ್ಲಾ. 1965 ಕ್ಕಿಂತ ಪೂರ್ವದಲ್ಲಿಯೇ ನಮ್ಮ ತಂದೆ ಮತ್ತು ದೊಡ್ಡಪ್ಪನ ನಡುವೆ ವಿಭಾಗ ಆಗಿರುವುದರಿಂದ ನಾವು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿದ್ದೇವೆ ಅಂದರೆ ಸರಿಯಲ್ಲಾ. ನಾವು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬಂದಿದ್ದರಿಂದ ನಮ್ಮ ನಮ್ಮ ಹೆಸರಿನಲ್ಲಿ ಪ್ರತ್ಯೇಕವಾಗಿ ಇವೆ ಅಂದರೆ ಸಾಕ್ಷಿಯು ಅವುಗಳು ವಾರಸಾ ಪ್ರಕಾರ ಬಂದಿವೆ ಅನ್ನುತ್ತಾರೆ. ನಮ್ಮ ತಂದೆಗೆ ವಾಟ್ನಿ ಪ್ರಕಾರ ಬಂದ ಆಸ್ತಿಗಳು ನಮಗೆ ವಾರಸಾ ಪ್ರಕಾರ ಬಂದಿರುತ್ತವೆ ಅಂದರೆ ಸರಿಯಲ್ಲಾ. ವಿಪಿಸಿ ನಂ.104 ನಮ್ಮ ಒಟ್ಟು ಕುಟುಂಬದ ಹಿತಾಸಕ್ತಿ ಇರುತ್ತದೆ ಅನ್ನುವ ಬಗ್ಗೆ ನಾವು ಯಾವುದೇ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲಾ, ನ್ಯಾಯಾಲಯದಲ್ಲಿ ದಾವಾ ಚಾಲ್ತಿ ಯಲ್ಲಿ ಇದ್ದುದರಿಂದ ನಾವು ಹಿಸ್ಸಾ ಮಾಡಿಕೊಂಡಿರುವುದಿಲ್ಲಾ. ನಮ್ಮ ಕುಟುಂಬದ ಆಸ್ತಿಗಳ ಬಗ್ಗೆ ಧಾರವಾಡ ಮತ್ತು ಬೆಂಗಳೂರು ನ್ಯಾಯಾಲಯದಲ್ಲಿ ವ್ಯಾಜ್ಯಗಳು ಚಾಲ್ತಿಯಲ್ಲಿ ಇರುವುದರಿಂದ ನಾವು ಹಿಸ್ಸಾ ಮಾಡಿಕೊಂಡಿರುವುದಿಲ್ಲಾ. ನನಗೆ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ದಾವಾ ಚಾಲ್ತಿಯಲಿ ಇದ್ದ ಬಗ್ಗೆ ನನಗೆ ನಂಬರುಗಳು ನೆನಪಿರುವುದಿಲ್ಲಾ. ನಮ್ಮ ಕುಟುಂಬದ ಆಸ್ತಿಗಳ ವಿಚಾರವಾಗಿ ಯಾವುದೇ ನ್ಯಾಯಾಲಯದಲ್ಲಿ ವ್ಯಾಜ್ಯಗಳು ಚಾಲ್ತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತೇನೆ ಅಂದರೆ ಸರಿಯಲ್ಲ. ಈ ದಾವೆಯಲ್ಲಿ ವಿಪಿಸಿ ನಂ.104 ಒಟ್ಟು ಕುಟುಂಬದ ಆಸ್ತಿಗಳು ಒಟ್ಟು ಕುಟುಂಬ ಆಸ್ತಿ ಅಂತಾ ಸಾಧಿಸುವ ಸಲುವಾಗಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ

ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳು ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದುದ್ದರಿಂದ ಮತ್ತು ಆಕೆ ವಿಧವೆಯಾಗಿದ್ದರಿಂದ ಅವರಿಗೆ ತೊಂದರೆ ಮಾಡುವ ಉದ್ದೇಶದಿಂದ ಆಕೆಯ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತೇನೆ ಅಂದರೆ ಸರಿಯಲ್ಲ. ದಿನಾಂಕಃ 16-10-2006 ರ ಕ್ರಯಪತ್ರ ಕಾನೂನು ಬದ್ದ ಕ್ರಯಪತ್ರ ಆಗಿರುವುದರಿಂದ ಅದನ್ನು ಅಸಿಂಧು ಅಂತಾ ಹೇಳಲು ಬರುವುದಿಲ್ಲಾ ಅಂದರೆ ಸರಿಯಲ್ಲಾ. ಸದರಿ ಕ್ರಯ ಪತ್ರವನ್ನು ಕಾಲ ವಿಳಂಬವಾಗಿ ಪ್ರಶ್ನಿಸುತ್ತಿದ್ದೇವೆ ಅಂದರೆ ಸರಿಯಲ್ಲಾ. ನಾನುವಾದಿಗೆ ಪ್ರಚೋದನೆ ನೀಡಿ ಸುಳ್ಳು ದಾವಾ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲಾ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ